ಕಲಾವಿದರಿಗೆ ಹಾಗೂ ಸಾಹಿತಿಗಳಿಗೆ ಮಾಸಾಶನ ನೀಡುವ ಬಗ್ಗೆ

೩೫೪. ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ)·—ಮಾನ್ಯ ಮುಖ್ಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟುಮಂದಿ ಕಲಾವಿದರಿಗೆ ಮತ್ತು ಸಾಹಿತಿಗಳಿಗೆ ಇದುವರೆಗೆ ಮಾಸಾಶನ ಮಂಜೂರು ಮಾಡಲಾಗಿದೆ.

(ಆ) ಗೌರವಧನಕ್ಕಾಗಿ ಸಲ್ಲಿಸಿದ್ದ ಪ್ರಸ್ತಾವನೆಗಳ ಬಗ್ಗೆ ಪರಿಶೀಲಿಸಿ ಕ್ರಮಕೈಗೊಂಡು ಮಂಜೂರು ಮಾಡಲು ಬೇಕಾದ ಅವಧಿ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು),—

(ಅ) ಒಬ್ಬ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗಿದೆ.

(ಆ) ವರ್ಷಕ್ಕೊಮ್ಮೆ ರಾಜ್ಯೋತ್ಸವದ ದಿನಕ್ಕೆ ಮುಂಚೆ ಗೌರವಧನವನ್ನು ನೀಡುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಮುಖ್ಯಮಂತ್ರಿಗಳ ಬರ ಪರಿಹಾರ ನಿಧಿಗೆ ಬಂದ ಹಣ ಹಾಗೂ ವೆಚ್ಚ ಮಾಡಲಾದ ಹಣದ ಬಗ್ಗೆ

೩೬೩. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ)—ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮುಖ್ಯ ಮಂತ್ರಿಗಳ ಬರ ಪರಿಹಾರ ನಿಧಿಗೆ ರಾಜ್ಯದ ಜನತೆಯಿಂದ ಬಂದ ಹಣವೆಷ್ಟು ?

(ಆ) ಇದರಲ್ಲಿ ವೆಚ್ಚ ಮಾಡಲಾಗಿರುವ ಹಣವೆಷ್ಟು ?

(ಇ) ಬರ ಪರಿಹಾರ ಕಾರ್ಯವನ್ನು ಮುಂದುವರಿಸಲಾಗುತ್ತಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

(ಅ) ರೂ. ೬೯೬,೦೨,೦೨೦–೭೯

(ಆ) ಇಲ್ಲಿಯವರೆಗೆ ಒಟ್ಟು ರೂ. ೧,೯೬,೫೫,೦೦೦ ವೆಚ್ಚ ಮಾಡಲಾಗಿದೆ. (ವೇತನ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ)

ರಾಜ್ಯದಲ್ಲಿ ಅತ್ಯಂತ ನೀರಿನ ಅಭಾವ ಪರಿಸ್ಥಿತಿ ಇರುವ ೧೦೯ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ೨,೬೯,೪೦,೦೦೦ ರೂಪಾಯಿಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.

(ಇ) ಇಲ್ಲ.

**Road accidents in State**

124. SRI G. RAJUGOWDA:— Will the Minister for Transport Small Savings and Prisons be pleased to state :

(a) How many motor accidents occured during 1985-86 and 1986-87 ?

(b) How many dead ; how many handicapped and how many injured ?